# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 470
2. ಸದಸ್ಯರ ಹೆಸರು : ಶ್ರೀ. ಸಿ.ಎನ್. ಮಂಜೇಗೌಡ,
3. ಉತ್ತರಿಸಬೇಕಾದ ದಿನಾಂಕ : 12.12.2024.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪ್ರಸ್ತುತ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಬಿದ್ದ ಮಳೆಯ ಪ್ರಮಾಣವೆಷ್ಟು: ಬಿದ್ದ ಮಳೆಗೆ ಎಷ್ಟು ಕೆರೆಕಟ್ಟೆಗಳು ಭರ್ತಿಯಾಗಿವೆ: | Karnataka State Natural Disaster Monitoring Centre ನಿಂದ ದೊರೆತ ಮಾಹಿತಿಯಂತೆ ಪ್ರಸಕ್ತ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಒಟ್ಟ 963 ಎಂ.ಎಂ. ಮಳೆ ಬಿದ್ದಿರುತ್ತದೆ. ಅದರಂತೆ, ಮೈಸೂರು ಜಿಲ್ಲೆಯಲ್ಲಿ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಡಿರುವ 353 ಕೆರೆಗಳ ಪೈಕಿ 121 ಕೆರೆಗಳು ಭರ್ತಿಯಾಗಿರುತ್ತವೆ.<br><br>ಮೈಸೂರು ಜಿಲ್ಲೆ, ವ್ಯಾಪ್ತಿಯಲ್ಲಿ ಪ್ರಸ್ತುತ ಸಾಲಿನಲ್ಲಿ 963 ಮಿ.ಮೀ ಮಳೆಯಾಗಿದ್ದು, ವಾಡಿಕೆ ಮಳೆ ಪ್ರಮಾಣ 826 ಮಿ.ಮೀ ಗಿಂತ ಶೇ.17 ರಷ್ಟು ಹೆಚ್ಚಾಗಿರುತ್ತದೆ. ಸಣ್ಣ ನೀರಾವರಿ ಇಲಾಖೆಯ 50 ಕೆರೆಗಳಲ್ಲಿ ಪ್ರಸ್ತುತ 36 ಕೆರೆಗಳು ಶೇಕಡ 51% ರಿಂದ 100% ರಷ್ಟು ತುಂಬಿದ್ದು, ಉಳಿದ 14 ಕೆರೆಗಳಲ್ಲಿ ಶೇಕಡ 31% ರಿಂದ 50% ರಷ್ಟು ಪ್ರಮಾಣದ ನೀರು ತುಂಬಿರುತ್ತದೆ..<br>ಪಂಚಾಯತ್ ರಾಜ್ ಇಂಜಿನಿಯರಿಂಗ್ ವ್ಯಾಪ್ತಿಯಲ್ಲಿ 71ಕೆರೆಗಳಿದ್ದು ಶೇ. 35% ರಷ್ಟು ಕೆರೆಗಳು ಪೂರ್ಣ ಪ್ರಮಾಣದಲ್ಲಿ ತುಂಬಿರುತ್ತವೆ. |
| ಆ. | ಮೈಸೂರು ತಾಲ್ಲೂಕಿನ ಉದಗೂರು, ಜಯಪುರ, ಹಾರೋಹಳ್ಳಿ ಹಾಗೂ ಇನ್ನಿತರೆ ಕೆರೆಗಳು ಭರ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸದರಿ ಕೆರೆಗಳೂ ಸೇರಿದಂತೆ ಮಳೆ ಕೊರತೆಯಿರುವ ಭಾಗಗಳ ಕೆರೆ ಕಟ್ಟೆಗಳನ್ನು ತುಂಬಿಸುವುದಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆಯೇ: ಕ್ರಮ ಕೈಗೊಳ್ಳದಿದ್ದಲ್ಲಿ ಕಾರಣಗಳೇನು? | ಗಮನಕ್ಕೆ ಬಂದಿದೆ.<br><br>ಮೈಸೂರು ತಾಲ್ಲೂಕಿನ ಉದಬೂರು, ಜಯಪುರ, ಹಾರೋಹಳ್ಳಿ ಕೆರೆಗಳನ್ನು ಇಬ್ಬಜಾಲ ಕೆರೆ ತುಂಬಿಸುವ ಯೋಜನೆಯ ಮೂಲಕ ತುಂಬಿಸಲಾಗುತ್ತಿದ್ದು, ಇದುವರೆವಿಗೂ ಉದಬೂರು ದೊಡ್ಡ ಕೆರೆ - 45% ರಷ್ಟು, ಚಿಕ್ಕ ಕೆರೆ – 35% ರಷ್ಟು, ಜಯಪುರ ಕೆರೆ – 70% ರಷ್ಟು ಮತ್ತು ಹಾರೋಹಳ್ಳಿ ಕೆರೆ – 80% ರಷ್ಟು ತುಂಬಿಸಲಾಗಿರುತ್ತದೆ.<br>ಒಟ್ಟು 353 ಕೆರೆಗಳ ಪೈಕಿ 121 ಕೆರೆಗಳು ಪೂರ್ಣವಾಗಿ ತುಂಬಿದ್ದು, ಕೆಲವೊಂದು ವಿಶೇಷ ಪ್ರಕರಣಗಳಲ್ಲಿ ನೀರಾವರಿ ವಂಚಿತ ಪ್ರದೇಶಗಳಿಗೆ ನದಿ ಮೂಲದಿಂದ ನೀರನ್ನು ಎತ್ತಿ ಕೆರೆ ತುಂಬಿಸುವ ಯೋಜನೆಗಳ ಮುಖೇನ ಕೆರೆಗಳನ್ನು ತುಂಬಿಸಲು ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ. |

ಕಡತ ಸಂಖ್ಯೆ: MID/125/LCQ/2024

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ
ಸಚಿವರು.